'ವಿಶ್ವಾಸ್..! ಪ್ಲೀಸ್... ಇಲ್ಲಿ ಟಿ.ವಿ ಕೂಡ ಇಲ್ಲ... ಏನಾಗ್ತಿದೆ ಅಂತ ಗೊತ್ತಾಗ್ತಿಲ್ಲ... ನಿಮ್ಮಮ್ಮ ಕೇಳಿಸಿದ್ದು, ಈಗ ಮೀರಾ ಹೇಳಿದ್ದು ಎಲ್ಲಾ ಕೇಳಿದ್ರೆ ಹೆದರಿಕೆ ಆಗುತ್ತೆ.. ಅಕಸ್ಮಾತ್ ನನ್ನ ಜಾಡು ಹಿಡಿದು ಪೊಲೀಸ್ನವರಾಗಲೀ.. ವಿಕ್ರಂ ಆಗಲೀ ಇಲ್ಲಿವರೆಗೂ ಬಂದರೆ ಈ ಮನೆಯಲ್ಲಿ ನಾನೊಬ್ಬಳೇ ಇರುವುದು ಎಂದು ಇರಲಿ...'

'ಹೀಗೆ ಮಾತಾಡುತ್ತಲೇ ಇದ್ದರೆ ಕಷ್ಟ. ನಿಮ್ಮ ಮಾತು ಹೇಗೆ ನಿಲ್ಲಿಸಬೇಕು ಅಂತ ಗೊತ್ತು ನನಗೆ..' ನನ್ನ ಗಲ್ಲವನ್ನು ತನ್ನ ಬಲಗೈನ ತೋರು ಬೆರಳಿನಲ್ಲಿ ಹಿಡಿದು ಮೇಲೆತ್ತಿದ್ದ ವಿಶ್ವಾಸ್ ನನ್ನ ಕಂಗಳಲ್ಲಿ ನೀರು ತುಂಬಿದ್ದರಿಂದ ಅವನ ಮುಖ ಮಂಜಾಗಿ ಕಂಡಿತು ನನಗೆ... ಕಣ್ಣು ಮಿಟುಕಿಸಿದೆ... ಕಂಗಳಲ್ಲಿ ತುಂಬಿದ ಕಂಬನಿ ಕೆನ್ನೆಯ ಮೇಲೆ ಜಾರಿತು... ನೋವಿನಿಂದ ಹಿಂಡಿದ್ದ ಅವನ ಮುಖ ನಿಚ್ಚಳವಾಗಿ ಕಂಡಿತು...

'ಸರಿ.. ಸರಿ... ನಾನು ಹೊರಡ್ತೀನಿ. ನೀವು ನಾಳೆ ಕೆಲಸಕ್ಕೆ ರಿಪೋರ್ಟ್ ಮಾಡಿಕೊಳ್ಳುವುದು ಬೇಡ... ಇನ್ನೊಂದೆರಡು ದಿನ ಎಲ್ಲೂ ಹೊರಗೆ ಹೋಗುವುದು ಬೇಡ...'

'ಹೂಂ' ತಲೆಯಾಡಿಸಿದೆ.

'ಅದೆಂತಹವರ ಜೊತೆ ಹದಿನಾಲ್ಕು ವರ್ಷ ಸಂಸಾರ ಮಾಡಿದೀರ್ರಿ... ಜೊತೆಗೆ ಇದ್ದಾಗ ಕೇರೇ ಇಲ್ಲ... ಬಿಟ್ಟು ಬಂದರೆ... ಬಿಟ್ಟಿರಲಾರೆ ಎಂದು ಈ ರೇಂಜಲ್ಲಿ ಹುಡುಕಿಸ್ತಾರಲ್ರೀ...'

ಅವನ ಫೋನ್ ರಿಂಗಾಗತೊಡಗಿತು.. ನನ್ನ ಎಳೆದುಕೊಂಡು ಸೋಫಾ ಬಳಿ ಸಾಗಿ ತನ್ನ ಫೋನನ್ನು ಕೈಗೆತ್ತಿಕೊಂಡ ವಿಶ್ವಾಸ್...

'ಈ ಬಂಧ ಎಷ್ಟು ಹಿತವಾಗಿದೆ..'

'ಅಮ್ಮಾ... ಹೇಳು... ಹೂಂ...' ಅತ್ತಲಿಂದ ಅವನ ತಾಯಿಯ ದನಿ.. ದನಿ ಕಿವಿಗೆ ಬೀಳುತ್ತಲಿದ್ದರೂ ಮಾತು ಅಸ್ಪಷ್ಟ. ಅವನ ಬಾಹುಗಳಲ್ಲಿ ನಾನು ಮತ್ತಳು..

'ಇವತ್ತು ಎಂಟು ಗಂಟೆಗೆ ಇರೋ ಫ್ಲೈಟಿನಲ್ಲಿ ಹೊರಡ್ತೀನಿ... ಸರಿ... ಇಲ್ಲ ಹೊರಡ್ತೀನಿ... ಏನೂ ಪ್ರಾಬ್ಲಂ ಆಗೊಲ್ಲ. ನೀನು ಧೈರ್ಯವಾಗಿರು...'

ಮಾತು ಮುಗಿಸಿ ಸ್ವಿಚ್ ಆಫ್ ಮಾಡಿದ ವಿಶ್ವಾಸ್ ಮುಖ ಗಂಭೀರವಾಗಿತ್ತು..


'ಏನಂತೆ?...'

'ಮೀರಾ ಹೇಳಿದ್ದು ನಿಜ. ಮಿಸೆಸ್ ಹಳ್ಳಿಮನೆಯವರು ಸ್ತ್ರೀಶಕ್ತಿ ಸಂಘಟನೆ ನಡೆಸುತ್ತಿದ್ದರು. ಅಲ್ಲಿನ ಹೆಣ್ಣು ಮಕ್ಕಳಿಗೆ ಬೊಂಬೆ ಮಾಡಲು ಹೇಳಿ ಕೊಡಲು ಬಂದ ಯುವಕ, ತನ್ನ ಮಾತುಗಳಿಂದ ಮರುಳು ಮಾಡಿ ಅವರನ್ನು ಓಡಿಸಿಕೊಂಡು ಹೋಗಿದ್ದಾನೆ. ಮದುವೆಯಾದ, ಎರಡು ಮಕ್ಕಳ ತಾಯಿಯಾದ ಅವಳನ್ನು ಮರುಳು ಮಾಡಿದ್ದಕ್ಕೆ, ಕರೆದುಕೊಂಡು ಹೋಗಿರುವುದಕ್ಕೆ ಅವನನ್ನು ಬಂಧಿಸುವುದಾಗಿ ಯಾರೋ ಪೊಲೀಸ್ ಅಧಿಕಾರಿ ಟಿ.ವಿಯಲ್ಲಿ ಹೇಳುತ್ತಿದ್ದಾರಂತೆ.. ನನ್ನ ಧರ್ಮಪತ್ನಿಯನ್ನು ವಿಶ್ವಾಸ್ ದೇಶಪಾಂಡೆ ಅಪಹರಿಸಿದ್ದಾನೆ ಎಂದು ವಿಕ್ರಂ ದೂರು ದಾಖಲಿಸಿದ್ದಾರಂತೆ... ಅಮ್ಮನಿಗೆ ಗಾಬರಿಯಾಗಿದೆ...' ಅವನ ಬಾಹುಗಳಿಂದ ಬಿಡಿಸಿಕೊಂಡು ಕೊಂಚ ದೂರ ಹೋಗಿ ಕುಳಿತೆ.

ವಿಶ್ವಾಸ್ ಬಂದು ಪಕ್ಕ ಕುಳಿತು ನನ್ನ ಹಸ್ತವನ್ನು ಅವನ ಹಸ್ತಗಳ ನಡುವೆ ಇರಿಸಿಕೊಂಡ.

**ಕನ್ನಡ**

ಮಿತವಾಗಿ
ಮಾತನಾಡಿ
ಕನ್ನಡ
ಉಳಿಸಿ
—ಬಾಲು ಪಟಗಾರ




'ಪ್ಲೀಸ್! ಗಾಬರಿಯಾಗಬೇಡಿ... ನಾನು ಮುಂದಿನ ಫ್ಲೈಟಿನಲ್ಲಿ ಬೆಂಗಳೂರಿಗೆ ಹೋಗ್ತೀನಿ. ನೀವು ಮನೆಯಲ್ಲೇ ಇರಿ... ಅಲ್ಲಿ ಪರಿಸ್ಥಿತಿ ನೋಡಿಕೊಂಡು ಫೋನ್ ಮಾಡ್ತೀನಿ. ಇನ್ನೆರಡು ದಿನದಲ್ಲಿ ನೀವು ಬನ್ನಿ... ನಾವು ಒಟ್ಟಿಗೆ ಇದ್ದೇವೆ. ಚೆನ್ನಾಗಿದ್ದೇವೆ. ಡೈವೋರ್ಸ್‌ಗೆ ಅರ್ಜಿ ಹಾಕಿದ್ದೇವೆ ಎಂದು ನಾವೂ ಒಂದು ಚಾನೆಲ್ಲಿಗೆ ಹೋಗಿ ಸಂದರ್ಶನ ಕೊಡೋಣ..'

'ನಂಗೆ ನಂಗೆ ಈ ರಂಪ.. ಬೇಕಿಲ್ಲ..'

'ಹೌದು.. ನಮಗೂ ಬೇಡ... but we have no choice. ಅವರು ರಂಪ, ರಾಡಿ ಮಾಡುತ್ತಿರುವಾಗ ನಮ್ಮ ಸತ್ಯವನ್ನು ನಾವು ಹೇಳಲೇಬೇಕು. ನೀವು ಧೈರ್ಯವಾಗಿ ಇರುತ್ತೀರಿ ತಾನೇ?... ಇಲ್ಲ ನನ್ನ ಜೊತೆ ಈಗಲೇ ಬರುತ್ತೀರೋ...'

'ಇಲ್ಲ... ಈಗ ಬರಲ್ಲ... ಧೈರ್ಯವಾಗಿ ಇರ್ತೇನೆ. ನೀವು ಹೊರಡಿ ವಿಶ್ವಾಸ್. ನಾನು ವಿಕ್ರಂಗೆ ಫೋನ್ ಮಾಡುತ್ತೇನೆ. ಎಲ್ಲಾ ಗೊತ್ತಿದ್ದೂ ಯಾಕೆ ಹೀಗೆ ಮಾಡುತ್ತಿದ್ದೀರಿ ಅಂತ ಕೇಳ್ತೀನಿ... ಹೋಗು ನೀನು ಅಂದು ಬಿಟ್ಟು ಈಗ ಯಾಕೆ ಹೀಗೆ ಸುದ್ದಿ ಕೇಸು ಮಾಡುತ್ತಿದ್ದೀರಿ ಅಂತ ಕೇಳ್ತೀನಿ...'

'ಈಗ ಬೇಡ... ಮೀರಾ ಹೇಳಿದ್ದು, ನಮ್ಮಮ್ಮ ಹೇಳಿದ್ದು ಎಲ್ಲಾ ಕೇಳಿ ನಾವು ನಿರ್ಧಾರ ತೆಗೆದುಕೊಳ್ಳುವುದು ಬೇಡ. ನಾನು ಹೋಗಿ ನೋಡುತ್ತೇನೆ. ಆಮೇಲೆ ಡಿಸೈಡ್ ಮಾಡೋಣ... ಏನಾದರೂ ಬೇಕಿದ್ದರೆ ಹೇಳಿ.. ತಂದುಕೊಟ್ಟು ಹೊರಡ್ತೀನಿ... ಎಂಟು ಗಂಟೆಗೆ ಫ್ಲೈಟಿದೆ..'

'ಎಲ್ಲಾ ಇದೆ.. ಏನೂ ಬೇಡ... ಕಾಫಿ ಕೊಡ್ಲಾ...'

'ಬೇಡ ಫೋನ್ ಮಾಡಿದ ತಕ್ಷಣ ತೊಗೋಬೇಕು...... ಟೆನ್ಶನ್ ಮಾಡ್ಕೊಬಾರದು..' ಅವನು ಹೇಳಿದಾಗ ತಲೆಯಾಡಿಸಿದೆ.

ಅವನು ಎದ್ದು ಅವನ ಬ್ಯಾಗು ರೆಡಿ ಮಾಡಿಕೊಳ್ಳುತ್ತಾ ಫೋನಿನಲ್ಲಿಯೇ ತನ್ನ ಟಿಕೆಟ್ ಬುಕ್ ಮಾಡಿಕೊಂಡ... ಎದ್ದು ಹೋಗಿ ಎರಡು ಲೋಟ ಕಾಫಿ ಮಾಡಿಕೊಂಡು ಬಂದು ಅವನ ಕೈಗೆ ಒಂದು ಲೋಟ ಕೊಟ್ಟೆ.. ಬೇಡವೆಂದಿದ್ದರೂ ಇಸಿದುಕೊಂಡು ಗುಟುಕರಿಸಿದ...

'ತುಂಬಾ ಚೆನ್ನಾಗಿದೆ ಕಾಫಿ... ಊರಲ್ಲಿ ನಾನು ಫಸ್ಟ್ ಟೈಂ ನಿಮ್ಮ ಮನೆಗೆ ಬಂದಾಗ ಕಾಫಿ ಕೊಡ್ರಿ ಎಂದು ಕೇಳಿ ಮಾಡಿಸಿಕೊಂಡಿದ್ದೆ... ಅವತ್ತೇ ನಾನು ಕ್ಲೀನ್ ಬೌಲ್ಡ್.... ಯು ಲುಕ್ಡ್ ಲೈಕ್ ಎ ಕ್ವೀನ್ ಲಾಸ್ಟ್ ಇನ್ ಎ ಪ್ಯಾಲೆಸ್..' ನಕ್ಕು ಕಾಫಿ ಗುಟುಕರಿಸಿದೆ. ಎಂಥಾ ಪರಿಸ್ಥಿತಿಯಲ್ಲಿಯೂ ಮನಸ್ಸಿಗೆ ಹಿತವಾಗುವಂತೆ ಮಾತನಾಡುವ, ನನ್ನ ಮುಖದಲ್ಲಿ ನಗೆ ಅರಳಿಸುವ ಶಕ್ತಿ ಇರುವ ವಿಶ್ವಾಸನತ್ತ ನೋಡಿದೆ. ಅವನ ಒಳ್ಳೆಯದಕ್ಕೆ ಅವನನ್ನು ದೂರ ಮಾಡಬೇಕು...

'ವಿಶ್ವಾಸ್..'

'ಹೂಂ...'

'ನೀವು ಹಿಂತಿರುಗಿ ಬರಬೇಡಿ.... ವಿಕ್ರಂ... ಕೊಟ್ಟಿರುವ ಕಂಪ್ಲೆಂಟ್‌ನಿಂದಾಗಿ ನಿಮ್ಮನ್ನು ಅರೆಸ್ಟ್ ಮಾಡಿಬಿಟ್ಟರೆ...' ನನ್ನ ದನಿ ನಡುಗಿತು.

'ಅರೆಸ್ಟ್ ಯಾಕೆ ಮಾಡ್ತಾರೆ? ವರ್ಸ್ಟ್ ಅಂದ್ರೆ ಏನು?.. ನನ್ನ ಹೆಂಡತಿ ವಿಶ್ವಾಸ್ನೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದಾಳೆ ಅಂತ ಕಂಪ್ಲೆಂಟ್ ಕೊಡಬಹುದಾ?... ಅದೇ ಗ್ರೌಂಡ್ಸ್ ಡೈವೋರ್ಸ್.. ಅಲ್ಲವೇ? ಸರೀನಪ್ಪ, ಅಂತಹ ಹೆಂಡತಿ ನಿನಗ್ಯಾಕೆ?.. ಬಿಟ್ಟುಬಿಡು ಅಂತ ಕೋರ್ಟ್ ಹೇಳುತ್ತೆ... ಫಿನಿಶ್ಡ್ ಅಲ್ಲವೇ?..'

ಅವನತ್ತ ಕಣ್ಣರಳಿಸಿದೆ. ಎಲ್ಲವೂ ಇವನು ಅಂದುಕೊಂಡಷ್ಟು ಸರಾಗವೇ?

'ವಿಶ್ವಾಸ್... ನೀವು ಹೇಳಿದ ಹಾಗೇ ಆಗಲಿ... ಈಗ ಬೆಂಗಳೂರಿಗೆ ಹೋಗುತ್ತೀರಲ್ಲ ಸರಿಯಾಗಿ ವಿಚಾರಿಸಿ...ಹುಷಾರು ಒಂದು ಮಾತ್ರ ಸದಾ ನಿಮ್ಮ ನೆನಪಿನಲ್ಲಿ ಇರಲಿ... ನಾವು ಒಟ್ಟಿಗೆ ಜೀವಿಸದಿದ್ದರೂ ನಮ್ಮಿಬ್ಬರ ಪ್ರೇಮದಲ್ಲಿ ಯಾವ ಕುಂದೂ ಇರುವುದಿಲ್ಲ... ನನ್ನ ಕೇಳಿದರೆ.. ನೀವು ಚಿಕ್ಕ ಹುಡುಗಿಯೊಬ್ಬಳನ್ನು ಮದುವೆಯಾಗಿ...'

'ತ್ಯಾಗಮೂರ್ತಿನಾ ನೀವು?...'

ನನ್ನ ಮಾತನ್ನು ಅವನು ಮಧ್ಯೆ ತಡೆದಾಗ ಕಣ್ಣು ಕಿರಿದುಗೊಳಿಸಿ ಅವನನ್ನು ದಿಟ್ಟಿಸಿದೆ..

'ನಿಮ್ಮ ತಾಯಿಗೆ ಮೊಮ್ಮಕ್ಕಳು ಬೇಡವೇ?... ನನಗೆ ಮಕ್ಕಳು ಬೇಡ... ವಿಶ್ವಾಸ್... ಜನ ಆಡಿಕೊಳ್ಳಲಿ.. ನನ್ನ ತೆಗಳಲಿ... ಹೀನಾಯವಾಗಿ ನೋಡಲಿ... ಐ ಡೋಂಟ್ ಕೇರ್... ನಮ್ಮ ಸಂಬಂಧ ಇರುತ್ತೆ... ಹೀಗೇ ಇರುತ್ತೆ... ಆದರೆ